ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/12/ಇಎಸ್‌ಟಿ(2)ಎ/2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು.
ದಿನಾಂಕ: 19-08-2016

**ಸುತ್ತೋಲೆ**

ವಿಷಯ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸ್ಥಳೀಯ ವೃಂದ ಮತ್ತು ಉಳಿಕೆ ವೃಂದಗಳಿಗೆ ಸಿಬ್ಬಂದಿಯವರನ್ನು ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಟಿಎಲ್‌ಎಕ್ಸ್ ದಿ:06-11-2013

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಹೆಚ್‌ಜೆಸಿ 2013 ದಿ: 29-01-2014 ಮತ್ತು 20-10-2014.

*-*-*

ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 371(ಜೆ)ಗೆ ತಿದ್ದುಪಡಿ ತರಲಾಗಿದ್ದು, ಅದರಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿರುವ ಹಾಗೂ ರಾಜ್ಯದ ರಾಜಧಾನಿಯಲ್ಲಿರುವ ಕೇಂದ್ರ ಕಛೇರಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ವೃಂದದ ಹುದ್ದೆಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 206 ಡಿಟಿಇ 2014 ದಿ: 22-04-2015ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಎಲ್ಲಾ ಸಂಸ್ಥೆಗಳಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದವರಿಗೆ ಮೀಸಲಾತಿ ಕಲ್ಪಿಸುವ ದೃಷ್ಟಿಯಿಂದ ಹೈದ್ರಾಬಾದ್-ಕರ್ನಾಟಕ ಸ್ಥಳಿಯ ವೃಂದದ ಗ್ರೂಪ್-ಎ(ಕಿರಿಯ ಶ್ರೇಣಿ) ಮತ್ತು ಗ್ರೂಪ್-ಬಿ ವೃಂದಕ್ಕೆ ಶೇ.75 ರಷ್ಟು, ಗ್ರೂಪ್-ಸಿ ವೃಂದಕ್ಕೆ ಶೇ.80 ಮತ್ತು ಗ್ರೂಪ್-ಡಿ ವೃಂದಕ್ಕೆ ಶೇ.85ರಷ್ಟು ಹುದ್ದೆಗಳನ್ನು ಮೀಸಲಿರಿಸಿ, ಕೇಂದ್ರ ಕಛೇರಿ ಹಾಗೂ ರಾಜಧಾನಿ ಪ್ರದೇಶದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ವೃಂದದವರಿಗೆ ಶೇ.8 ರಷ್ಟು ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ.

ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಟಿಇ 24 ಇಎಸ್‌ಟಿ(1)ಎ 2013 ದಿ:04-05-2015 ರಲ್ಲಿ ಸ್ಥಳೀಯ ವೃಂದಕ್ಕೆ ಸೇರಲು ಇಚ್ಛಿಸುವ ಸಿಬ್ಬಂದಿಗಳಿಗೆ ನಿರ್ದಿಷ್ಟಪಡಿಸಲಾದ ಅನುಬಂಧ ಹಾಗೂ ದಾಖಲೆಗಳೊಂದಿಗೆ 45 ದಿನಗೊಳಗಾಗಿ ಅಭಿಮತ ಸಲ್ಲಿಸಲು ಸುತ್ತೋಲೆಯಲ್ಲಿ ತಿಳಿಸಲಾಗಿದ್ದು, ಅದರಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಲು ಇಚ್ಛಿಸಿ ಅಭಿಮತ ಸಲ್ಲಿಸಿದ ಸಿಬ್ಬಂದಿಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಿದವರು ಎಂದು ಹಂಚಿಕೆ ಮಾಡಿ ಪ್ರಚುರಪಡಿಸಲಾಗಿರುತ್ತದೆ.

ಉಲ್ಲೇಖ (2) ರ ಪ್ರಕಾರ ಸ್ಥಳೀಯ ವೃಂದಕ್ಕೆ ಸೇರಿದವರನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಹಂಚಿಕೆ ಮಾಡಬೇಕಾಗಿರುತ್ತದೆ.

**ಸ್ಥಳ: ಸರ್ಕಾರಿ ಮುದ್ರಣ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು**

| ದಿನಾಂಕ | ಸಮಯ | ಸಿಬ್ಬಂದಿ ವರ್ಗ |
|---|---|---|
| 24-08-2016 | 11:00 ಪೂರ್ವಾಹ್ನ | ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ನಾನ್ ಹೈದ್ರಾಬಾದ್-ಕರ್ನಾಟಕ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಗ್ರೂಪ್-ಬಿ, ಸಿ ಮತ್ತು ಡಿ ಬೋಧಕ/ಬೋಧಕೇತರ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಸ್ಥಳ ನಿಯುಕ್ತಿ) ಹಂಚಿಕೆ ಪ್ರಕ್ರಿಯೆಗೆ ಯಾವುದೇ ಸಿಬ್ಬಂದಿಯು ಹಾಜರಾಗದಿದ್ದಲ್ಲಿ ನಿಯಮಾನುಸಾರ ನಿರ್ದೇಶಕರ ಅಂತಿಮ ತೀರ್ಮಾನದಂತೆ ಹಂಚಿಕೆ ಮೂಲಕ ಸ್ಥಳ ನಿಯುಕ್ತಿ ಮಾಡಲಾಗುವುದು. |
| 24-08-2016 | 3.00 ಅಪರಾಹ್ನ | ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 371(ಜೆ) ಗೆ ತಿದ್ದುಪಡಿತರಲಾಗಿದ್ದು, ಅದರಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿರುವ ಹಾಗೂ ರಾಜ್ಯದ ರಾಜಧಾನಿಯಲ್ಲಿರುವ ಕೇಂದ್ರ ಕಛೇರಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ವೃಂದದ ಹುದ್ದೆಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಇದರನ್ವಯ ಶೇ.8 ರಂತೆ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಾತಿ ಕಲ್ಪಿಸುವ ಸಲುವಾಗಿ ಹುದ್ದೆಗಳ ಎದುರು ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ವೃಂದದವರನ್ನು (ಹೈದ್ರಾಬಾದ್-ಕರ್ನಾಟಕ ಸ್ಥಳೀಯರಲ್ಲದವರನ್ನು) ಸ್ಥಳಾಂತರಿಸುವ ಪ್ರಕ್ರಿಯೆ. |

| | | |
|---|---|---|
| | | **<u>ಮತ್ತು</u>**<br>ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಿದ ಸಿಬ್ಬಂದಿಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ಸಿಬ್ಬಂದಿಗಳು ಕೇಂದ್ರ ಕಛೇರಿ ಹಾಗೂ ರಾಜ್ಯದ ರಾಜಧಾನಿ ಶಿಕ್ಷಣ ಸಂಸ್ಥೆಗಳಿಗೆ ನಿಯಮಾನುಸಾರ ಶೇ.8 ರ ಮೀಸಲಾತಿಯಲ್ಲಿ ವರ್ಗಾವಣೆ (ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ). |

ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಇಂಜಿನಿಯರಿಂಗ್ ಕಾಲೇಜು/ ಸರ್ಕಾರಿ ಕಿರಿಯತಾಂತ್ರಿಕ ಶಾಲೆಗಳ ಪ್ರಾಂಶುಪಾಲರು

ಪ್ರತಿ;

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು-01
2. ಎಲ್ಲಾ ಜಂಟಿ ನಿರ್ದೇಶಕರು/ ಆಡಳಿತಾಧಿಕಾರಿ/ ಸಹಾಯಕ ಆಡಳಿತಾಧಿಕಾರಿಗಳು/ ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದಶನಾಲಯ, ಬೆಂಗಳೂರು
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ನಿರ್ದೇಶಕರ ಆಪ್ತಶಾಖೆ.
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/12/ಇಎಸ್‌ಟಿ(2)ಎ/2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು.
ದಿನಾಂಕ: 19-08-2016

**ಸುತ್ತೋಲೆ**

**ವಿಷಯ** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 2016 ನೇ ಸಾಲಿನ ಸಿಬ್ಬಂದಿಗಳ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

**ಉಲ್ಲೇಖ**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 75 ಶಾಸನ 2012, ದಿ:6-2-2013
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ಡಿಟಿಇ 2013, ದಿ:03-07-2014
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 118 ಟಿಇಸಿ 2016 ದಿ: 15-07-2016.

*-*-*

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ಅಧಿನಿಯಮ-2012 ಮತ್ತು ನಿಯಮಗಳು-2013 ಅನ್ನು ಜಾರಿಗೆ ತರಲಾಗಿದ್ದು ಸದರಿ ಅಧಿನಿಯಮದನ್ವಯ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ನಡೆಸುವ ಸಲುವಾಗಿ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ. ಈ ಸುತ್ತೋಲೆಯಲ್ಲಿ ಹೊರಡಿಸಲಾಗಿರುವ ಸೂಚನೆ ಮತ್ತು ಮಾರ್ಗಸೂಚಿಯನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಿ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತರತಕ್ಕದ್ದು.

**ಸ್ಥಳ: ಸರ್ಕಾರಿ ಮುದ್ರಣ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು**

| ದಿನಾಂಕ | ಸಮಯ | ಸಿಬ್ಬಂದಿ ವರ್ಗ |
|---|---|---|
| **ಸಾರ್ವಜನಿಕ ಹಿತದೃಷ್ಟಿ ಮೇರೆಗಿನ ವರ್ಗಾವಣೆ** | | |
| 26-08-2016 | 10.30 ಪೂರ್ವಾಹ್ನ | ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ (ಗ್ರೂಪ್-ಬಿ,ಸಿ ಮತ್ತು ಡಿ) ಸಿಬ್ಬಂದಿಗಳ ಬೋಧಕ/ಬೋಧಕೇತರ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ (ಅಧಿನಿಯಮ- 2012ರ ಪ್ರಕರಣ (7)ರ ಅನ್ವಯ ಕಾರ್ಯಭಾರ ಹೊಂದಿರದ ಹೆಚ್ಚುವರಿ ಹುದ್ದೆಗಳು) |
| 26-08-2016 | 11.00 ಪೂರ್ವಾಹ್ನ | ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ (ಗ್ರೂಪ್-ಬಿ ಮತ್ತು ಸಿ) ಬೋಧಕ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ |
| 26-08-2016 | 2.30 ಅಪರಾಹ್ನ | ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ (ಗ್ರೂಪ್-ಬಿ,ಸಿ,ಡಿ) ಬೋಧಕೇತರ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ |
| **ಕೋರಿಕೆ ಮೇರೆಗಿನ ವರ್ಗಾವಣೆ** | | |
| 27-08-2016 | 10.30 ಪೂರ್ವಾಹ್ನ | ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ (ಗ್ರೂಪ್-ಬಿ ಮತ್ತು ಸಿ) ಬೋಧಕ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ |
| 27-08-2016 | 2.30 ಅಪರಾಹ್ನ | ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿನ (ಗ್ರೂಪ್-ಬಿ,ಸಿ,ಡಿ) ಬೋಧಕೇತರ ಸಿಬ್ಬಂದಿಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ |

**ಸೂಚನೆಗಳು:**

1. ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಅಧಿನಿಯಮ-2012 ಮತ್ತು ನಿಯಮಗಳು-2013ರಲ್ಲಿ ನಿಗದಿ ಪಡಿಸಿರುವ ವಿಧಿ-ವಿಧಾನಗಳನ್ವಯ ನಡೆಸಲಾಗುವುದು. ಆದ್ದರಿಂದ ಸಂಬಂಧಪಟ್ಟ ಸಿಬ್ಬಂದಿಗಳು ಇಲಾಖೆಯ ವೆಬ್‌ಸೈಟ್‌ನಲ್ಲಿ (www.dte.kar.nic.in) ಪ್ರಕಟಿಸಲಾಗಿರುವ ಅಧಿನಿಯಮ-2012 ಮತ್ತು ನಿಯಮಗಳು-2013ನ್ನು ಓದಿಕೊಳ್ಳತಕ್ಕದ್ದು.

2. ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಅಧಿನಿಯಮ 2013ರ ಪ್ರಕರಣ (3)ರಲ್ಲಿ ನೀಡಿರುವ ವಿವರಣೆಯಂತೆ ಹಾಗೂ ನಿಯಮ–2013 ರ ಕಂಡಿಕೆ(4)ರಂತೆ ಹೊರಡಿಸಲಾಗಿರುತ್ತದೆ. ವರ್ಗಾವಣೆ ನಿಯಮಗಳನ್ವಯ ಕನಿಷ್ಠ ಅವಧಿ ಪೂರೈಸಿರುವವರು ವರ್ಗಾವಣೆಗೆ ಅರ್ಹರಿರುತ್ತಾರೆ ಹಾಗೂ ಅವರು ಕಾರ್ಯ ನಿರ್ವಹಿಸುತ್ತಿರುವ ವಲಯದಲ್ಲಿ ವಿವಿಧ ವೃಂದಗಳಲ್ಲಿ ಸಲ್ಲಿಸಿರುವ ಸೇವಾ ವರ್ಷಗಳ ಒಟ್ಟು ಸಂಖ್ಯೆಯ ಆಧಾರದ ಮೇಲೆ ಆದ್ಯತಾ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

3. ಸಂಸ್ಥೆ/ಕಛೇರಿಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಪ್ರಕಟಿಸಲಾಗಿರುತ್ತದೆ. ಆದರೆ ಹುದ್ದೆಗಳು ಖಾಲಿ ಇದ್ದ ಮಾತ್ರಕ್ಕೆ ಸಂಬಂಧಪಟ್ಟ ಅರ್ಜಿದಾರರು ಆ ಸಂಸ್ಥೆ/ಕಛೇರಿಗಳಲ್ಲಿ ವರ್ಗಾವಣೆಗೆ ಹಕ್ಕುಳವರಾಗಿರುವುದಿಲ್ಲ. ಸಂಬಂಧಪಟ್ಟ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ/ಕಛೇರಿ ಮತ್ತು ವರ್ಗಾವಣೆ ಬಯಸಿರುವ ಸಂಸ್ಥೆ/ಕಛೇರಿಯಲ್ಲಿನ ಅಗತ್ಯ ಕಾರ್ಯಭಾರವನ್ನು ಗಣನೆಗೆ ತೆಗೆದುಕೊಂಡು ಪರಿಗಣಿಸಲಾಗುವುದು. ಈ ವಿಚಾರದಲ್ಲಿ ಸಕ್ಷಮ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

4. ವಿಶೇಷ ಪ್ರಕರಣಗಳ ವರ್ಗಾವಣೆಯನ್ನು ನಿಯಮ–2013ರ ಕಂಡಿಕೆ (7)ರಲ್ಲಿ ನೀಡಿರುವ ಆದ್ಯತಾ ಕ್ರಮಾಂಕದಲ್ಲಿ ಮತ್ತು ಕಂಡಿಕೆ(8)ರಲ್ಲಿ ನಿಗದಿಪಡಿಸಿರುವ ಪ್ರಮಾಣ ಮೀರದಂತೆ ನಡೆಸಲಾಗುವುದು.

5. ವಿಶೇಷ ಪ್ರಕರಣದಡಿಯಲ್ಲಿ ಒಂದಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಕೋರಿಕೆ ಸಲ್ಲಿಸಿದಲ್ಲಿ ಅಂತಹ ಪ್ರಕರಣಗಳಲ್ಲಿ ಆಯಾ ವಿಶೇಷ ಪ್ರಕರಣಗಳ ಜೇಷ್ಠತಾ ಪಟ್ಟಿಯ ಅನುಸಾರ ಮಾತ್ರ ಜೇಷ್ಠತೆಯನ್ನು ಪರಿಗಣಿಸಲಾಗುವುದು.

6. ಯಾವುದೇ ಸಿಬ್ಬಂದಿಯವರ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿರುವ ಬಗ್ಗೆ ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾಪುಸ್ತಕದಲ್ಲಿ ನಮೂದಿಸಿರುವ ದಾಖಲೆಯ ಆಧಾರದ ಮೇಲೆ ಪ್ರಾಚಾರ್ಯರು ದೃಢೀಕರಿಸಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಯಾವುದೇ ಸಿಬ್ಬಂದಿಯ ಸೇವಾ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡಿದ್ದು ಸಕ್ಷಮ ಪ್ರಾಧಿಕಾರಕ್ಕೆ ತೃಪ್ತಿಕರವೆಂದು ಘೋಷಿಸಲು ಪ್ರಸ್ತಾವನೆಯನ್ನು ಸಲ್ಲಿಸದಿದ್ದಲ್ಲಿ, ಸದರಿಯವರ ವಿರುದ್ಧ ಶಿಸ್ತು ಪ್ರಕರಣ ಬಾಕಿ ಇಲ್ಲದ ಪಕ್ಷದಲ್ಲಿ ಇದಕ್ಕೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರಿಂದ ದೃಢೀಕರಿಸಿ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

7. ಅಧಿನಿಯಮದ – ಪ್ರಕರಣ 9(3)ರಂತೆ ಸಿಬ್ಬಂದಿಯು ದೈಹಿಕವಾಗಿ ಅಸಮರ್ಥವಾಗಿದ್ದಲ್ಲಿ ಅಂಗವಿಕಲರ ಪ್ರಕರಣದಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವವರು, ಶೇ 40 ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ಜಿಲ್ಲಾ ವೈದ್ಯ ಅಧಿಕಾರಿಯಿಂದ ಪಡೆದ ಪ್ರಮಾಣ ಪತ್ರವನ್ನು ಅಥವಾ ಜಿಲ್ಲಾ ವೈದ್ಯ ಮಂಡಳಿಯು ನೀಡಿರುವ ದಾಖಲೆಯನ್ನು ಕಡ್ಡಾಯವಾಗಿ ತರತಕ್ಕದ್ದು.

8. ಅಧಿನಿಯಮದ – ಪ್ರಕರಣ 9(4)ರಂತೆ ಸಿಬ್ಬಂದಿಯವರ ಪತಿ/ಪತ್ನಿ ಅಥವಾ ಮಕ್ಕಳು ಇದ್ದು, ಕೆಲಸ ಮಾಡುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆಯು ಲಭ್ಯವಿಲ್ಲದೆ ತೀವ್ರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿದ್ದರೆ, ಆ ಕಾಯಿಲೆಗೆ ಅಗತ್ಯವಾದ ವೈದ್ಯಕೀಯ ಚಿಕಿತ್ಸೆ ಕೊಡಿಸಲು ಸಾಧ್ಯವಾಗುವ ಹಾಗೆ, ಅಂಥ ಚಿಕಿತ್ಸೆ ಲಭ್ಯವಿರುವಂಥ ಒಂದು ಸ್ಥಳಕ್ಕೆ ಸಿಬ್ಬಂದಿ ವರ್ಗಾವಣೆ ಮಾಡುವುದು ಅಗತ್ಯವಾಗಿದ್ದರೆ, ಸಂಬಂಧಪಟ್ಟ ಸಿಬ್ಬಂದಿಯು, ಕಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆಯು ಲಭ್ಯವಿಲ್ಲವೆಂಬ ಸಂಗತಿಯನ್ನು ತಿಳಿಸಿ, ಅಗತ್ಯ ಚಿಕಿತ್ಸೆಯು ಯಾವ ಸ್ಥಳದಲ್ಲಿ ದೊರೆಯುತ್ತದೆ ಎಂಬುದನ್ನು ನಿರ್ದಿಷ್ಟಪಡಿಸಿ ಮತ್ತು ಅಗತ್ಯವಿರುವ ವೈದ್ಯಕೀಯ ಚಿಕಿತ್ಸೆ ಕೊಡಿಸಲು ಅಂಥ ಒಂದು ಸ್ಥಳಕ್ಕೆ ಸಿಬ್ಬಂದಿ ವರ್ಗಾವಣೆ ಮಾಡುವುದು ಅವಶ್ಯವೆಂದು ಪ್ರಮಾಣೀಕರಿಸಿ ಜಿಲ್ಲಾ ವೈದ್ಯಕೀಯ ಮಂಡಳಿಯು ನೀಡಿರುವ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು. ಬೇರೆ ಯಾವುದೇ ಪ್ರಮಾಣ ಪತ್ರವನ್ನು ಅಂಗೀಕರಿಸಲಾಗುವುದಿಲ್ಲ.

9. ಅಧಿನಿಯಮದ – ಪ್ರಕರಣ 9(2)ರಂತೆ ವಿಧವೆ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿರುವ ಸಿಬ್ಬಂದಿಯವರು ಪತಿಯ ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು ಮತ್ತು ಮರುವಿವಾಹವಾಗಿರುವುದಿಲ್ಲವೆಂದು ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು.

10. ಪತಿ–ಪತ್ನಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅಧಿನಿಯಮದ ಪ್ರಕರಣ 9(1)ರ ಪ್ರಕಾರ ಪತಿ/ಪತ್ನಿ, ಸಿಬ್ಬಂದಿ, ರಾಜ್ಯ/ಕೇಂದ್ರ ಸರ್ಕಾರದ ನೌಕರರಾಗಿದ್ದರೆ ಮಾತ್ರ ವರ್ಗಾವಣೆಗೆ ಅರ್ಹರಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಿ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

11. ಮೇಲ್ಕಂಡ ಕಂಡಿಕೆ (8) ರಿಂದ (10) ರವರೆಗೂ ಕಾಣಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕಛೇರಿ ಸುತ್ತೋಲೆ ಕ್ರಮಾಂಕ ಡಿಟಿಇ/12/ಇಎಸ್‌ಟಿ(2)ಎ/2016 ದಿ:**25-07-2016** ರಲ್ಲಿ ನೀಡಲಾಗಿರುವ ನಮೂನೆಗಳಲ್ಲಿಯೇ ಸಲ್ಲಿಸತಕ್ಕದ್ದು. ಅನ್ವಯಿಸುವ ದಾಖಲೆಗಳನ್ನು ಕೌನ್ಸಲಿಂಗ್ ಸಮಯದಲ್ಲಿ ಹಾಜರುಪಡಿಸದಿದ್ದಲ್ಲಿ ಅಥವಾ ಅಪೂರ್ಣ ಮಾಹಿತಿ ನೀಡಿದ್ದಲ್ಲಿ, ಅಂತಹ ಕೋರಿಕೆಗಳನ್ನು ತಿರಸ್ಕರಿಸಲಾಗುವುದು ಅಥವಾ ವಿಶೇಷ ಪ್ರಕರಣದಡಿ ಪ್ರಸ್ತುತ

ಸ್ಥಳದಲ್ಲಿಯೇ ಮುಂದುವರೆಯಲು ಅವಕಾಶ ನೀಡುವುದಿಲ್ಲ(ನಮೂನೆಗಳನ್ನು DTE ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು).

12. ಸಾರ್ವಜನಿಕ ಹಿತಾಸಕ್ತಿ ಮೇರೆಗೆ ನೋಟೀಸ್ ನೀಡಲಾಗಿರುವ ಸಿಬ್ಬಂದಿಯವರು ಕೌನ್ಸಿಲಿಂಗ್‌ಗೆ ಹಾಜರಾಗದಿದ್ದಲ್ಲಿ ಅಥವಾ ಸ್ಥಳ ಆಯ್ಕೆ ಮಾಡಿಕೊಳ್ಳಲು ವಿಫಲವಾದವರನ್ನು ಕೌನ್ಸಿಲಿಂಗ್ ಅಂತ್ಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಆಧರಿಸಿ ಸಕ್ಷಮ ಪ್ರಾಧಿಕಾರವೇ ಆದೇಶ ಹೊರಡಿಸುತ್ತದೆ.
13. ಗಣಕೀಕೃತ ವರ್ಗಾವಣೆ ಕೌನ್ಸಿಲಿಂಗ್ ನಲ್ಲಿ ವರ್ಗಾವಣೆಗಳ ಸಂಖ್ಯೆಯು ನಿಗದಿಪಡಿಸಿರುವ ಮಿತಿಯು ತಲುಪುವವರೆಗೂ ಅಥವಾ ಆ ದಿನ ನಿಗದಿಪಡಿಸಿದ ಸಮಯದೊಳಗೆ ಈಗಾಗಲೇ ನೋಟೀಸ್ ನೀಡಲಾಗಿರುವ ಸಿಬ್ಬಂದಿಯವರ ಪ್ರಕರಣಗಳು ಸಂಪೂರ್ಣವಾಗಿ ಮುಗಿಯುವವರೆಗೂ ನಡೆಸಲಾಗುತ್ತದೆ.
14. ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ತಪ್ಪು ಮಾಹಿತಿ ನೀಡಿದ್ದಲ್ಲಿ ಕೆ.ಸಿ.ಎಸ್(ಸಿಸಿಎ) ನಿಯಮಾವಳಿಗಳ 1957ರಂತೆ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು.
15. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಿದ ಸಿಬ್ಬಂದಿಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದಲ್ಲಿ ಅಂತಹ ಸಿಬ್ಬಂದಿಗಳು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಇತರೆ ಸ್ಥಳಗಳಿಗೆ ನಿಯಮಾನುಸಾರ ವರ್ಗಾವಣೆ ಪಡೆಯಲು ಅರ್ಹರಾಗಿರುತ್ತಾರೆ.

ನಿರ್ದೇಶಕರು

**ಇವರಿಗೆ:**

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಇಂಜಿನಿಯರಿಂಗ್ ಕಾಲೇಜು/ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ/ಸ್ಪೆರಿಕ್ ಪ್ರಾಂಶುಪಾಲರು ಈ ಸುತ್ತೋಲೆಯಲ್ಲಿ ಹೊರಡಿಸಲಾಗಿರುವ ಸೂಚನೆ ಮತ್ತು ಮಾರ್ಗಸೂಚಿಯನ್ನು ಸಂಸ್ಥೆಯ ಸೂಚನ ಫಲಕದಲ್ಲಿ ಪ್ರಕಟಿಸಿ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತರತಕ್ಕದ್ದು ಹಾಗೂ ಪರಿಚಲನೆ ಮೂಲಕ ಸಿಬ್ಬಂದಿಗಳ ಗಮನಕ್ಕೆ ತಂದು ಸಹಿ ಪಡೆದುಕೊಳ್ಳತಕ್ಕದ್ದು.

**ಪ್ರತಿ;**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು-01
2. ಎಲ್ಲಾ ಜಂಟಿ ನಿರ್ದೇಶಕರು/ ಆಡಳಿತಾಧಿಕಾರಿ/ ಸಹಾಯಕ ಆಡಳಿತಾಧಿಕಾರಿಗಳು/ ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದಶನಾಲಯ, ಬೆಂಗಳೂರು
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ನಿರ್ದೇಶಕರ ಆಪ್ತಶಾಖೆ.
5. ಕಛೇರಿ ಪ್ರತಿ.